

# ಬಣ್ಣಗಳ ಶ್ರೋತೃ!

■ ಪ್ರವೀಣ ಕುಲಕರ್ಣಿ

ಹಾದು, ಇರುವೆಗೆ ಇರುವಂತೆಯೇ ಮನುಷ್ಯನಿಗೂ ಅಂಟೆನಾ ಇದ್ದಿದ್ದರೆ? ಎಂದಿಗಾದರೂ ನಿಮ್ಮ ಮನಸ್ಸಿನಲ್ಲಿ ಇಂತಹ ಪ್ರಶ್ನೆ ಮೂಡಿದ್ದಿದೆಯೇ? ಸುತ್ತಲೂ ಇರುವ ಎಲ್ಲವನ್ನೂ ಗ್ರಹಿಸಲು ಕಣ್ಣು–ಕಿವಿ–ಮೂಗು ಇರುವಾಗ ಅಂಟೆನಾ ಮಾತೇಕೆ ಎಂಬ ಪ್ರಶ್ನೆಯನ್ನು ಸ್ಪೇನ್ ದೇಶದ ಬಾರ್ಸಿಲೋನಾ ನಿವಾಸಿ ನೀಲ್ ಹಾರ್ಬಿಸನ್ ಅವರನ್ನು ಕೇಳೀರಿ ಮತ್ತೆ. ಏಕೆಂದರೆ, ಅವರ ತಲೆಯ ಮೇಲೊಂದು 'ಇನ್‌ಬಿಲ್ಟ್' ಅಂಟೆನಾ ಇದೆ. ಅದರ ವಿಶೇಷ ಏನಪ್ಪಾ ಅಂದರೆ, ಬಣ್ಣವನ್ನು ಅದು ಹಾರ್ಬಿಸನ್‌ಗೆ 'ಕೇಳಿಸುವಂತೆ' ಮಾಡುತ್ತದೆ!

ಹಾರ್ಬಿಸನ್, ತಮ್ಮನ್ನು ತಾವು ಕರೆದುಕೊಳ್ಳುವುದು 'ಸೈಬೋರ್ಗ್ ಕಲಾವಿದ' ಎಂದು. ಸೈಬೋರ್ಗ್ ಅಂದರೆ ಯಾರು ಗೊತ್ತೆ? 'ದೇಹದೊಳಗೆ ಯಾಂತ್ರಿಕ ಸಾಧನಗಳನ್ನು ಅಳವಡಿಸಿಕೊಳ್ಳುವ ಮೂಲಕ ಮಾನವನ ಸಹಜ ಮಿತಿಗಳನ್ನು ಮೀರಿದಂತಹ ದೈಹಿಕ ಸಾಮರ್ಥ್ಯವನ್ನು ಗಳಿಸಿಕೊಂಡ ವ್ಯಕ್ತಿ' ಎಂದರ್ಥ. ವೈಜ್ಞಾನಿಕ ಕಥಾಹಂದರದ ಕಾದಂಬರಿಗಳಲ್ಲಿ, ಹಾಲಿವುಡ್ ಸಿನಿಮಾಗಳಲ್ಲಿ ಮಾತ್ರ ಕಾಣಸಿಗುತ್ತಿದ್ದ 'ಸೈಬೋರ್ಗ್' ಎಂಬ ಈ ಕಾಲ್ಪನಿಕ ವ್ಯಕ್ತಿ, ಈಗ ನೈಜರೂಪ ತಾಳಿ ಜನರ ಮಧ್ಯದಲ್ಲೇ ಬಂದಿದ್ದಾನೆ.

'ನನ್ನ ತಲೆಯ ಮೇಲಿನ ಅಂಟೆನಾ ಹೊತ್ತು ತರುವ ಸಂದೇಶಗಳು ನನಗೆ ಅಕ್ಷರಶಃ ಬಣ್ಣಗಳನ್ನು ಕೇಳಿಸುತ್ತವೆ ಮತ್ತು ಆ ಬಣ್ಣಗಳು ನನ್ನ ಪಾಲಿಗೆ ಸಂಗೀತದಂತೆ ಭಾಸವಾಗುತ್ತವೆ' ಎನ್ನುತ್ತಾರೆ ಹಾರ್ಬಿಸನ್. ಈ ಕಲಾವಿದ, ಬಾಲ್ಯದಲ್ಲಿ ಅತ್ಯಂತ ವಿರಳವಾದ ಸಮಸ್ಯೆಯಿಂದ ಬಳಲುತ್ತಿದ್ದರು. ಕಪ್ಪು–ಬಿಳುಪು ಬಿಟ್ಟು ಬೇರೆ ಯಾವ ಬಣ್ಣಗಳೂ ಅವರಿಗೆ ಗೋಚರಿಸುತ್ತಿರಲಿಲ್ಲ. ಅಂದರೆ, ಅದು ಬಣ್ಣದ ಕುರುಡುತನ (ಕಲರ್ ಬ್ಲೈಂಡ್‌ನೆಸ್). 1980–1990ರ ದಶಕದಲ್ಲಿ ನಾವು ನೋಡುತ್ತಿದ್ದ ಕಪ್ಪು–ಬಿಳುಪಿನ ಟಿ.ವಿ. ದೃಶ್ಯಗಳಂತೆ ಹೊರಗಿನ ಎಲ್ಲ ನೋಟಗಳೂ ಅವರಿಗೆ ಕಪ್ಪು–ಬಿಳುಪಾಗಿ ಕಾಣುತ್ತಿದ್ದವು. ಉದಾಹರಣೆಗೆ ಗಾಢ ಹಸಿರಿನ ಎಲೆ ಕೂಡ ಅವರಿಗೆ ಕಪ್ಪಾಗಿಯೇ ಗೋಚರಿಸುತ್ತಿತ್ತು.

ಇಂದ್ರಿಯ ಶಕ್ತಿಯ ಕೊರತೆಗಳನ್ನು ಮೀರಿನಿಲ್ಲುವ ಅತೀಂದ್ರಿಯ 'ಬಲ'ವನ್ನು ಪಡೆಯಲು ಹಾರ್ಬಿಸನ್ ನಡೆಸಿದ ಪ್ರಯೋಗಗಳಿಗೆ ಲೆಕ್ಕವೇ ಇಲ್ಲ. ವೈದ್ಯರ ಬಳಿಗೆ ಹೋಗುವುದು, ಶಸ್ತ್ರಚಿಕಿತ್ಸೆಗೆ ಒಳಗಾಗುವುದು ಅವರಿಗೆ ಮಾಮೂಲು. ತಮ್ಮ ಬದುಕಿನ, ತಮ್ಮ ಅಸ್ಮಿತೆಯ ರೂಪಾಂತರಕ್ಕೆ ಇಂತಹ ಗೀಳು ಅಗತ್ಯ ಎಂದು ಬಲವಾಗಿ ನಂಬಿದವರು ಅವರು. ಇಂಗ್ಲೆಂಡ್‌ನ ಸಂಗೀತ ಕಾಲೇಜಿನಲ್ಲಿ ಓದುತ್ತಿರುವಾಗ ಅವರೊಂದು ಅಂಟೆನಾ ಅಭಿವೃದ್ಧಿಪಡಿಸಿದರು. ಅದರಿಂದ ಬಣ್ಣವನ್ನು ಗುರುತಿಸಲು ಸಾಧ್ಯವಾಗುತ್ತದೆ ಎಂದೂ ಪ್ರತಿಪಾದಿಸಿದರು.

ಶಸ್ತ್ರ ಚಿಕಿತ್ಸಕರ ಬಳಿ ಆ ಅಂಟೆನಾ ಹಿಡಿದುಕೊಂಡು ಹೋದ ಹಾರ್ಬಿಸನ್, ತಮ್ಮ ತಲೆಬುರುಡೆಯಲ್ಲಿ ಒಂದು ತೂತು ಕೊರೆದು ಅದನ್ನು ಅಳವಡಿಸುವಂತೆ ಕೇಳಿಕೊಂಡರು. ಶಸ್ತ್ರ ಚಿಕಿತ್ಸಕರು ಅವರ ತಲೆಬುರುಡೆಯಲ್ಲಿ ಒಂದು ರಂಧ್ರವನ್ನು ಕೊರೆದೇಬಿಟ್ಟರು. ಹಾರ್ಬಿಸನ್ ತಲೆಗೊಂದು ಅಂಟೆನಾ ಬಂದೇಬಿಟ್ಟಿತು. ತಟ್ಟನೆ ನೋಡಿದರೆ, ಅದೊಂದು ಧರಿಸಬಹುದಾದ ತಾಂತ್ರಿಕ ಸಲಕರಣೆಯಂತೆ ಕಾಣುತ್ತದೆ. ಆದರೆ, ಕಣ್ಣು, ಕಿವಿ, ಮೂಗಿನಂತೆ ಆ ಅಂಟೆನಾ, ಹಾರ್ಬಿಸನ್ ಅವರ ಪಾಲಿಗೆ ದೇಹದ ಅಂಗವೇ ಆಗಿಬಿಟ್ಟಿದೆ. ಅವರ ಕಣ್ಣುಗಳು ನೋಡಲಾಗದ ಬಣ್ಣಗಳನ್ನು ಈ ಅಂಟೆನಾ ಅವರಿಗೆ ಕೇಳಿಸುವಂತೆ ಮಾಡುತ್ತದೆ.

ಅಂಟೆನಾ ಹೇಗೆ ಬಣ್ಣವನ್ನು ಕೇಳಿಸುತ್ತದೆ ಎನ್ನುವ ಪ್ರಶ್ನೆ ನಮ್ಮನ್ನೆಲ್ಲ ಕಾಡುವುದಲ್ಲವೇ? ಅದಕ್ಕೆ ಹಾರ್ಬಿಸನ್ ಕೊಡುವ ಉತ್ತರ ಹೀಗಿದೆ: 'ಬಣ್ಣಗಳಿಂದ ಪ್ರತಿಫಲನಗೊಳ್ಳುವ ಕಿರಣಗಳು ನೇರಳಾತೀತ ಕಿರಣಗಳಾಗಿ ಪರಿವರ್ತನೆಗೊಂಡು ಅಂಟೆನಾ ಮೂಲಕ ತಲೆಯಲ್ಲಿ ತರಂಗಗಳನ್ನು ಎಬ್ಬಿಸುತ್ತವೆ. ಎದುರು ಇರುವುದು ಯಾವ ಬಣ್ಣ ಎಂಬುದನ್ನು ನಾನು ಆ ತರಂಗಗಳ ಮೂಲಕ ಕೇಳಿಸಿಕೊಳ್ಳುತ್ತೇನೆ'.

ಹಾರ್ಬಿಸನ್ ಅವರು ತುಂಬಾ ಹಿಂದೆಯೇ ತಲೆಯಲ್ಲಿ ಅಂಟೆನಾ ಅಳವಡಿಸಿಕೊಂಡಿದ್ದು, ಈಗ ಅದರ ಸುತ್ತ ಮೂಳೆ ವಹನ ವ್ಯವಸ್ಥೆ ಬೆಳೆದಿದ್ದು, ಆ ಅಂಟೆನಾ ದೇಹದ ಭಾಗವಾಗಿದೆ. ಬಣ್ಣಗಳಿಗೆ ತಕ್ಕಂತೆ ಅಂಟೆನಾ ತರಂಗಗಳನ್ನು ಎಬ್ಬಿಸುತ್ತವೆ. ಆ ತರಂಗಗಳು ಅಂಟೆನಾ ಸುತ್ತ ಬೆಳೆದ ವಹನ ವ್ಯವಸ್ಥೆಯ ಮೂಲಕ ಮಿದುಳಿಗೆ ಸಂದೇಶವನ್ನು ರವಾನಿಸುತ್ತವೆ. ಅಂದಹಾಗೆ, ಮನುಷ್ಯರ ಸಾಮಾನ್ಯ ಶ್ರವಣ ಶಕ್ತಿಗೂ ಹಾರ್ಬಿಸನ್ ಬಣ್ಣದ ಧ್ವನಿ ಗ್ರಹಿಕೆಗೂ ಅಜಗಜಾಂತರವಿದೆ.

'ಮೊದಮೊದಲು ಬಣ್ಣಗಳು ಹೊರಡಿಸುತ್ತಿದ್ದ ತರಂಗಗಳು ನನ್ನಲ್ಲಿ ಗೊಂದಲ ಮೂಡಿಸುತ್ತಿದ್ದವು. ಯಾವ ಬಣ್ಣದ ತರಂಗಾಂತರ ಎಷ್ಟು ಎನ್ನುವುದನ್ನು ಒಮ್ಮೆ ನಿಖರವಾಗಿ ಲೆಕ್ಕ ಹಾಕಿಕೊಂಡ ಬಳಿಕ ಎಲ್ಲ ಗೊಂದಲಗಳು ಮಾಯವಾದವು. ಯಾವ ಬಣ್ಣದ ಧ್ವನಿ ಹೊರಟರೂ ಅದು, 'ಇದೇ ಬಣ್ಣದ್ದು' ಎಂಬುದನ್ನು ಹೇಳುವಷ್ಟು ತಲೆಯಲ್ಲಿ ಹೊಂದಾಣಿಕೆಗಳು ಆದವು' ಎಂದು ಹಾರ್ಬಿಸನ್ ವಿವರಿಸುತ್ತಾರೆ. ಅವರೇನಾದರೂ ಕತ್ತಲಲ್ಲಿ ಹೊರಟರೆ ಅಂಟೆನಾ ನಿಶ್ಶಬ್ದವಾಗಿ ಕುಳಿತುಬಿಡುವುದಂತೆ. ಬೆಳಕಿನಲ್ಲಿ ಬಣ್ಣದ ಕಿರಣಗಳು ಪ್ರತಿಫಲಿಸಿದಾಗ ಮಾತ್ರ ಅದು ಕ್ರಿಯಾಶೀಲವಾಗಿ ಕೆಲಸ ಮಾಡುವುದಂತೆ.

ಯುರೋಪ್ ತುಂಬಾ ಮನೆಮಾತಾಗಿರುವ ಹಾರ್ಬಿಸನ್, ಲಿಯೊನಾರ್ಡೊ ಡಿ ಕ್ಯಾಪ್ರಿಯೊ, ಟಾಮ್ ಕ್ರೂಸ್ ಅವರಂತಹ ದಿಗ್ಗಜರನ್ನು ಭೇಟಿ ಮಾಡುವ ಅವಕಾಶವನ್ನೂ ಗಿಟ್ಟಿಸಿದ್ದಾರೆ. ಈಗ ಈ ಸೈಬೋರ್ಗ್‌ನ ನೋಟ ಸಮಯದ ಮೇಲೆ ನೆಟ್ಟಿದೆ. ಸಮಯವು ಹೇಗೆ ಕಳೆದುಹೋಗುತ್ತಿದೆ ಎಂಬುದನ್ನು ಗ್ರಹಿಸುವುದು, ಅದರ ಗತಿಬಿಂಬವನ್ನು ಮಿದುಳಿನ ಕಾಲ್ಪನಿಕ ಕ್ಯಾನ್ವಾಸ್‌ನಲ್ಲಿ ಸೆರೆಹಿಡಿಯುವುದು ಅವರ ಕನಸು. ಯಾರಿಗೆ ಗೊತ್ತು? ಹಾರ್ಬಿಸನ್ ಅವರ ಸಮಯದ ಚಲನೆ ಕುರಿತ ಗ್ರಹಿಕೆಗಳು ಜಗತ್ತಿನ ಕಾಲವನ್ನೇ ಬದಲಿಸಬಲ್ಲ ಕ್ರಾಂತಿಕಾರಕ ಮಾಹಿತಿಯನ್ನೇ ಹೊರಹಾಕೀತು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65